ಸಿಸಿ ನಂಃ 2226/2024

ಸಿ.ಡಬ್ಲೂ – 6

ಪಿ.ಡಬ್ಲೂ –3

**4 ನೇ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ಧಾರವಾಡ.**

| | | |
|---|---|---|
| ಸಾಕ್ಷಿದಾರರ ಹೆಸರು | : | ಇನುಸ ಶೇಖ |
| ತಂದೆಯ ಹೆಸರು | : | ರಸುಲಸಾಬ |
| ವಯಸ್ಸು | : | 51 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸ ಸ್ಥಳ | : | ಧಾರವಾಡ . |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು :12-01-2026

**ಮುಖ್ಯ ವಿಚಾರಣೆ : ಮಾನ್ಯ ಹಿಸಸಅ ರವರಿಂದ**

ಆರೋಪಿ ನನ ತಮ್ಮ. ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಪೋಲಿಸರು ನನ್ನನ್ನು ವಿಚಾರಣೆ ಮಾಡಿಲ್ಲ ಹೇಳಿಕೆ ಪಡೆದಿಲ್ಲ.

**(ಮಾನ್ಯ ಹಿಸಸಅರವರು ಸಾಕ್ಷಿಯನ್ನು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)**

**ಪಾಟೀಸವಾಲುಃ ಮಾನ್ಯ ಹಿಸಸಅವರಿಂದ**

ಸಿಸಿ ನಂಃ 2226/2024

ಸಿ.ಡಬ್ಲೂ – 6

ಪಿ.ಡಬ್ಲೂ –3

ದಿನಾಂಕಃ 26-05-2024 ರಂದು ಸಂಜೆ 7.30 ಕ್ಕೆ ಆರೋಪಿ ಮತ್ತು ಆತನ ಸ್ನೇಹಿತ ಸೈಯದ ಅವರು ಗೋವಕೊಪ್ಪ ರಸ್ತೆಯ ಹತ್ತಿರ ಇರುವ ನಲವಡಿ ಶಾಳೆಯ ಬಳಿ ಹೋಗುತ್ತಿದ್ದಾಗ ಅಪಘಾತವಾಗಿದೆ ಎಂದು ನನಗೆ ಗೊತ್ತಾಯಿತು ಎಂದೆರ ಸರಿಯಲ್ಲ. ಆ ದಿನ ಆರೋಪಿ ಸದರಿ ವಾಹನವನ್ನು ಅತಿ ಜೋರಾಗಿ ಚಲಾಯಿಸಿಕೊಂಡು ರೋಡ ಹಂಸ ಜಂಪ ಮಾಡಿಸಿದ್ದರಿಂದ ಹಿಂದೆ ಕುಳಿತಿದ್ದ ಆತನ ಸ್ನೇಹಿತ ಕೆಳಗೆ ಬಿದ್ದು ತಲೆಗೆ ಭಾರಿ ಪೆಟ್ಟು ಬಿದ್ದು ಆಸ್ಪತ್ರೆಯಲ್ಲಿ ಮರಣ ಹೊಂದಿದ ಎಂದರೆ ನನಗೆ ಗೊತ್ತಿಲ್ಲ. ಮೇಲೆ ಓದಿ ಹೇಳಿದ ಹಾಗೆ ಪೋಲಿಸರಿಗೆ ಹೇಳಿಕೆ ಕೊಟ್ಟಿದ್ದೆನೆ ಎಂದರೆ ಸರಿಯಲ್ಲ. ಸದರ ಹೇಳಿಕೆಯನ್ನು ನಿಪಿ.9 ಎಂದು ಗುರುತಿಸಲಾಯಿತು. ನಿಪಿ.9 ರಂತೆ ಹೇಳಿಕೆ ಕೊಟ್ಟಿದರು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

**( ಆನಂದ ಎಸ್ ಕರಿಯಮ್ಮನವರ್)**

4 ನೇ ಹಿ ದಿ ನ್ಯಾ.ಹಾಗೂ ಜೆಎಂಎಫ್‌ಸಿ,

ಧಾರವಾಡ.